ಕಥೆ

# ದುಗ್ಗೋಜಿ ಮಾಸ್ತ್ರು ಭೌತವಾದ



**ಡಾ. ನಾ. ಮೊಗಸಾಲೆ**

ಕಲೆ: ಎಸ್.ವಿ. ಹೂಗಾರ್

ಸೀತಾಪುರದ ದುರ್ಗಾಪರಮೇಶ್ವರಿ ಪ್ರೈಮರಿ ಶಾಲೆಯಲ್ಲಿ – ಅದೂ ಒಂದನೇ ತರಗತಿಗೆ – ಅಧ್ಯಾಪಕರಾಗಿ ಮೂವತ್ತನಾಲ್ಕು ವರುಷ ದುಡಿದು ನಿವೃತ್ತರಾಗಿರುವ ದುಗ್ಗೋಜಿ ಮಾಸ್ತ್ರಿಗೆ ಈಗ ಎಪ್ಪತ್ತಾರು ವರುಷ. ಅವರು ಮೂಲತಃ ಸೀತಾಪುರದವರಲ್ಲ. ಕೇರಳದ ಮಂಜೇಶ್ವರದ ಯಾವುದೋ ಒಂದು ಮೂಲೆಯಿಂದ ವಲಸೆ ಬಂದ ಅವರು ಕನ್ನಡವನ್ನು ಕಲಿತು ಅಧ್ಯಾಪಕ ವೃತ್ತಿಗೆ ಬಂದವರು. ಅವರ ಖಾದಿ ಜುಬ್ಬಾ, ಸೊಂಟದ ಬಿಳಿ ಪಂಚೆ, ಬಗಲಿನ ಒಂದು ಖಾದಿ ಚೀಲ ಈ ಮೂರನ್ನೇ ನೋಡಿ ದುರ್ಗಾಪರಮೇಶ್ವರಿ ಶಾಲೆಯ ಸಂಚಾಲಕರಾದ ತಿಮ್ಮಪ್ಪಯ್ಯನವರು ಮೊದಲ ನೋಟದಲ್ಲೇ ಅವರನ್ನು ಅಧ್ಯಾಪಕರಾಗಿ ನೇಮಕ ಮಾಡಿದ್ದರು. ಇಂಥ ದುಗ್ಗೋಜಿಯವರು ಸೀತಾಪುರಕ್ಕೆ ಕಾಲಿಡುವಾಗ ದೈಹಿಕವಾಗಿ ಹೇಗಿದ್ದರೋ ಹಾಗೇ ಈಗಲೂ ಇದ್ದಾರೆ ಎಂದು ಆಡಿಕೊಳ್ಳುವವರು ಸೀತಾಪುರದಲ್ಲಿ ಸಾಕಷ್ಟು ಮಂದಿ ಇದ್ದಾರೆ. ಅಂದರೆ ಅವರ ತಲೆಕೂದಲಲ್ಲಿ ಅಲ್ಲಲ್ಲಿ ಇಷ್ಟಿಷ್ಟು ಎಂಬಂತೆ ಬಿಳಿಯಾಗಿದ್ದು ಬಿಟ್ಟರೆ ಅವರ ನಿಡು ತೋಳಾಗಲೀ ಬಲಿಷ್ಠವಾದ ಮೀನಖಂಡಗಳಾಗಲಿ ಬಳಲಿದ್ದಿಲ್ಲ. ಮುಖದಲ್ಲಿ ನೆರಿಗೆ ಬಿದ್ದದ್ದಿಲ್ಲ. ಕುತ್ತಿಗೆ ಉದ್ದ ಆದದ್ದಿಲ್ಲ. ಮಾತುಗಳೂ ಅಷ್ಟೇ 'ಹೇಗಿದ್ದೀರಿ?' ಎಂದು ಇದಿರಾದವರನ್ನು ಪ್ರಶ್ನಿಸುವ, ಅವರು ತಾನು ಎಷ್ಟೇ ಅವಸರದಲ್ಲಿದ್ದರೂ ಇದಿರಾದವರ ಕುಶಲ ವಿಚಾರಿಸಿಯೇ ತೀರುತ್ತಾರೆ. ಆ ಮೇಲೆ ಬಸ್ಸಿಗೆ ಓಡಿ ಹೋಗುವವರ ಹಾಗೆ ಬೀಸುಗಾಲಲ್ಲಿ ನಡೆದಾಡುವುದು ಅವರ ವೈಶಿಷ್ಟ್ಯ. ಅಂಥ ದುಗ್ಗೋಜಿ ಮಾಸ್ತ್ರನ್ನು ಪ್ರಾಯಃ ಸೀತಾಪುರದ ಯಾರೊಬ್ಬ ಮಂದಿಯೂ ಟೀಕಿಸಿದ್ದಿಲ್ಲ. ಹಾಗೆಂದು ಒಳ್ಳೆಯವರು ಎಂದು ಪರಿಗಣಿಸಿ ಆಡಿದ್ದೂ ಕಡಿಮೆ. ಆದರೆ 'ಅವರೊಬ್ಬ ಭೌತವಾದಿ' ಎಂದು ತಮಾಷೆಗೆ ಆಡಿಕೊಂಡದ್ದು ಸಾಕಷ್ಟು ಉಂಟು!

ಭೌತವಾದ ಅಂದರೆ ಏನು ಎನ್ನುವುದು, ಅವರನ್ನು ಭೌತವಾದಿ ಎನ್ನುವವರಿಗೂ ಖಚಿತವಾಗಿ ಗೊತ್ತಿರಲಿಲ್ಲ. ಗಾಂಧಿವಾದಿ ಎನ್ನುವುದಕ್ಕೆ ಪರ್ಯಾಯವಾಗಿ ಈ ವಿಶೇಷಣವನ್ನು ಮೊದಲು ಹರಿಬಿಟ್ಟವರು ಬೆಟ್ಟುಮನೆ